# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ 129ರಲ್ಲಿ ದಿನಾಂಕ: 05.12.2020 ರಂದು, ನಡೆದ ವಾರ್ಡ್ ಕಮಿಟಿ ಸಭೆಯ ಸಭಾ ನಡವಳಿಗಳು

ದಿನಾಂಕ: 05.12.2020ರಂದು ವಾರ್ಡ್ ಸಂಖ್ಯೆ 129ರ ಡಿಸೆಂಬರ್ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

**ಹಾಜರಿದ್ದ ಸದಸ್ಯರು:–**

1. ಶ್ರೀ ವಿಶ್ವನಾಥ್, ಅಧೀಕ್ಷಕ ಅಭಿಯಂತರರು ದಾಸರಹಳ್ಳಿ ವಲಯ ಹಾಗೂ ವಾರ್ಡ್ ಸಂಖ್ಯೆ–129ರ ನೋಡಲ್ ಅಧಿಕಾರಿಗಳು.
2. ಶ್ರೀಮತಿ ಅನಿತಾ ರಾಜ್, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–129.
3. ಶ್ರೀ ಹನುಮಂತರಾಜು, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
4. ಶ್ರೀನಿವಾಸ್ ರಾವ್ ಪಿ ಮಾರ್ಷಲ್ ವಾರ್ಡ್–129.
5. ರಾಮಣ್ಣ, ಎನ್.ಜಿ.ಇ.ಎಫ್ ಬಡಾವಣೆ, ಮಲ್ಲತ್ತಹಳ್ಳಿ ನಿವಾಸಿ
6. ವೇಣುಗೋಪಾಲ್, ಎನ್.ಜಿ.ಇ.ಎಫ್ ಬಡಾವಣೆ, ನಾಗರಬಾವಿ ನಿವಾಸಿ
7. ಮಂಜೇಗೌಡ, ಬೀದಿ ದೀಪ ನಿರ್ವಹಣೆ ಗುತ್ತಿಗೆದಾರರು.

ವಾರ್ಡ್ ಸಂಖ್ಯೆ–129ರ ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು.

**ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

ಹಿಂದಿನ ಸಭೆಯಲ್ಲಿ ಚರ್ಚಿಸಲಾದ/ದೂರುಗಳ ಬಗ್ಗೆ ಸಂಬಂಧಪಟ್ಟವರೊಂದಿಗೆ ಚರ್ಚಿಸಲಾಗಿ,

- ಉಪಸ್ಥಿತರಿದ್ದ ಸದಸ್ಯರುಗಳು ಅವರ ರಸ್ತೆಗಳಲ್ಲಿ Street sweeping ಸಮರ್ಪಕವಾಗಿ ಆಗುತ್ತಿಲ್ಲದಿರುವ ಬಗ್ಗೆ ದೂರನ್ನು ಸಲ್ಲಿಸಿದ್ದು ತತ್ಸಂಬಂದ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರವರು ಈ ಎಲ್ಲಾ ಬ್ಲಾಕ್ ಗಳಲ್ಲಿ ಪೌರ ಕಾರ್ಮಿಕರ ಕೊರತೆ ಇರುವುದರಿಂದ ಸಮರ್ಪಕವಾಗಿ Street sweeping ಮಾಡಲು ಆಗುತ್ತಿಲ್ಲದಿರುವುದರ ಬಗ್ಗೆ ತಿಳಿಸಿರುತ್ತಾರೆ. ತತ್ಸಂಬಂದ ಕೂಡಲೇ ಎಲ್ಲಾ ಬ್ಲಾಕ್ಗಳಲ್ಲಿ ಕೊರತೆಯಿರುವ ಪೌರ ಕಾರ್ಮಿಕರುಗಳನ್ನು ನಿಯೋಜಿಸಿ ಕೋರಿ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ. ಹಾಲಿ ಇರುವ ಪೌರ ಕಾರ್ಮಿಕರನ್ನು ಉಪಯೋಗಿಸಿಕೊಂಡು ಎಲ್ಲಾ ರಸ್ತೆಗಳನ್ನು Street sweeping ಮಾಡಲು ಕ್ರಮ ವಹಿಸಲು ತಿಳಿಸಲಾಗಿರುತ್ತದೆ.

ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು/ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ)

- ವಾರ್ಡ್ –129 ನಲ್ಲಿ ತ್ಯಾಜ್ಯ ಸಂಗ್ರಹಣೆಗೆ ಹಾಗೂ ಸಾಗಾಣಿಕೆಗೆ ಹೊಸ ಏಜೆನ್ಸಿ ನಿಯೋಜಿಸಲಾಗಿದ್ದು, ಆದರೆ ಒಣ ಕಸ ಪ್ರತ್ಯೇಕವಾಗಿ ಸಂಗ್ರಹಿಸುವ ಕೆಲಸವು ಸಮರ್ಪಕವಾಗಿ ಆಗುತ್ತಿಲ್ಲದಿರುವುದರ ಬಗ್ಗೆ ಹಾಜರಿದ್ದ ಸದಸ್ಯರು ದೂರಿದ್ದು, ಈ ಸಂಬಂಧ ಕಿರಿಯ ಆರೋಗ್ಯ ಪರಿವೀಕ್ಷಕರು ಒಣ ಕಸದ ಸಂಗ್ರಹಣೆಗೆ ನೀಡಲಾಗಿದ್ದ ಹಳೆ ಗುತ್ತಿಗೆದಾರರನ್ನು ರದ್ದು ಮಾಡಲಾಗಿರುವುದಾಗಿ ಹಾಗೂ ಹೊಸದಾಗಿ ಒಣ ಕಸ ಸಂಗ್ರಹಣೆಗೆ ಹೊಸ ಏಜೆನ್ಸಿಗೆ ಕಾರ್ಯಾದೇಶವನ್ನು ನೀಡಲಾಗಿದ್ದು ಸದರಿಯವರು 10ನೇ ಡಿಸೆಂಬರ್ ನಿಂದ ಶುರು ಮಾಡಿರುತ್ತಾರೆಂದು ತಿಳಿಸಿರುತ್ತಾರೆ.

  ಕ್ರಮ :– ಕಿರಿಯ ಆರೋಗ್ಯ ಪರಿವೀಕ್ಷಕರು/ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ)

- ಮಾನ್ಯ ಆಯುಕ್ತರು ವಾಟ್ಸಾಪ್ ನಲ್ಲಿ ತಿಳಿಸಿರುವಂತೆ My city my Budget 20-21 ಯೋಜನೆಯಡಿ ಸಾರ್ವಜನಿಕ ಶೌಚಾಲಯ ನಿರ್ಮಿಸಲು ಇರುವ ಸ್ಥಳಾವಕಾಶಧ ಬಗ್ಗೆ ಮಾಹಿತಿ ನೀಡುವಂತೆ ನಾಗರೀಕ ಸಂಸ್ಥೆಗಳ ಪದಾಧಿಕಾರಿಗಳನ್ನು ನೋಡಲ್ ಅಧಿಕಾರಿಗಳು ಕೋರಿದರು.

- 14ನೇ ಬಡಾವಣೆಯಲ್ಲಿ ಹಾದು ಹೋಗುತ್ತಿರುವ ಮಳೆ ನೀರುಗಾಲುವೆಯ ರಸ್ತೆ ಬದಿಯಲ್ಲಿರುವಂತಹ ಡೆಬ್ರಿಸ್ ತೆರವುಗೊಳಿಸಲು ಹಾಗೂ ನಿರ್ಹಣೆಗಾಗಿ ಬಿಟ್ಟಿರುವಂತಹ ಹಾಳಾಗಿರುವ ಗೇಟ್ ಅನ್ನು ಕೂಡಲೇ ಸರಿಪಡಿಸಲು ಸಹಾಯಕ ಅಭಿಯಂತರರು ಬೃ.ನೀ.ಗಾ ರವರಿಗೆ ಸಾರ್ವಜನಿಕರು ಕೋರಿದರು. ಹಾಗೂ ವಿದ್ಯಾನಿಕೇತನ ಶಾಲೆ ಬಳಿ, ಬಾಲಾಜಿ ಬಡಾವಣೆ, ರೈಲ್ವೇ ಬಡಾವಣೆ ಮಳೆ ನೀರುಗಾಲುವೆಯ ಪಕ್ಕದಲ್ಲಿ ಬೆಳೆದಿರುವಂತಹ ಗಿಡ–ಗಂಟೆಗಳನ್ನು ನಿರ್ವಹಣೆಗಾಗಿ ನೀಡಲಾಗಿರುವ ಗುತ್ತಿಗೆಯವರಿಂದಲೇ ಸರಿಪಡಿಸಿಕೊಡಬೇಕೆಂದು ಉಪಸ್ಥಿತರಿದ್ದ ಬೃ.ನೀ.ಗಾ ವಿಭಾಗದ ಸಹಾಯಕ ಅಭಿಯಂತರರನ್ನು ತೆರವುಗೊಳಿಸಲು ನೋಡಲ್ ಅಧಿಕಾರಿಗಳು ಸೂಚಿಸಿದರು.

  ಕ್ರಮ :– ಸಹಾಯಕ ಅಭಿಯಂತರರು (ಬೃ.ನೀ.ಗಾ)

- ವಾರ್ಡ್ ವ್ಯಾಪ್ತಿಯ ಪ್ರಮುಖ ರಸ್ತೆಗಳ ರಸ್ತೆ ಗುಂಡಿಗಳನ್ನು ಬಿಬಿಎಂಪಿ ವತಿಯಿಂದ ಪ್ರಾರಂಭಿಸಲಾಗಿರುವ ಡಾಂಬರು ಮಿಶ್ರಣ ಘಟಕದಿಂದ ಡಾಂಬರು ಮಿಶ್ರಣ ಪಡೆದು ಗುಂಡಿಗಳನ್ನು ಮುಚ್ಚಲು ಕ್ರಮ ವಹಿಸಲಾಗಿದ್ದು, ಇನ್ನುಳಿದ ರಸ್ತೆ ಗುಂಡಿಗಳನ್ನು ಆದ್ಯತೆಯ ಮೇರೆಗೆ ಮುಚ್ಚಲು ಕ್ರಮ ವಹಿಸಲಾಗುವುದೆಂದು ಸಹಾಯಕ ಅಭಿಯಂತರರು ಸಭೆಗೆ ತಿಳಿಸಿದರು.

- ಬೆಂಗಳೂರು ಜಲಮಂಡಳಿ ವತಿಯಿಂದ ವಿವಿಧ ನೀರು ಸರಬರಾಜು/ಒಳ ಚರಂಡಿ ಕಾಮಗಾರಿಗಳಿಗಾಗಿ ರಸ್ತೆಗಳನ್ನು ಅಗೆಯುತ್ತಿದ್ದು, ಕಾಮಗಾರಿ ಮುಗಿದ ನಂತರ ರಸ್ತೆಗಳನ್ನು ಮರುಪೂರಣಗೊಳಿಸದಿರುವುದರಿಂದ ಸಾರ್ವಜನಿಕರು ಹಾಗೂ ವಾಹನ ಸವಾರರಿಗೆ ಅತೀವ ಅನಾನುಕೂಲ ಉಂಟಾಗುತ್ತಿದ್ದು, ಅಗೆದಿರುವ ರಸ್ತೆಗಳನ್ನು ಶೀಘ್ರವಾಗಿ ಮರುಪೂರಣಗೊಳಿಸಲು ಸಾರ್ವಜನಿಕರು ಸಭೆಯಲ್ಲಿ ಹಾಜರಿದ್ದ ಜಲಮಂಡಳಿಯ ಅಭಿಯಂತರರನ್ನು ಆಗ್ರಹಿಸಿದರು

  ಕ್ರಮ:– ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು (ಜಲಮಂಡಳಿ)

- ವಾರ್ಡ್ ವ್ಯಾಪ್ತಿಯ ಹಲವು ಬಡಾವಣೆಗಳ ರಸ್ತೆ ಬದಿ ಚರಂಡಿಗಳನ್ನು ಅಭಿವೃದ್ಧಿಗೊಳಿಸಲಾಗುತ್ತಿದ್ದು, ಅದರ ಜೊತೆ ಜೊತೆಯಲ್ಲೇ ಮೋರಿ (ಕಲ್ವರ್ಟ್)ಗಳನ್ನು ಅಭಿವೃದ್ಧಿಗೊಳಿಸಲು/ದುರಸ್ಥಿಗೊಳಿಸಲು ಸಾರ್ವಜನಿಕರು ಕೋರಿದ ಮೇರೆಗೆ ವಾರ್ಡ್ ಸಹಾಯಕ ಅಭಿಯಂತರರು ಮುಂದಿನ ಕ್ರಿಯಾ ಯೋಜನೆಯಲ್ಲಿ ಕಲ್ವರ್ಟ್‌ಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನವನ್ನು ಮೀಸಲಿರಿಸಿ ಹಂತ ಹಂತವಾಗಿ ಕಾಮಗಾರಿಯನ್ನು ನಿರ್ವಹಿಸಲು ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.
- ಸಹಾಯ App ನಲ್ಲಿ ದಾಖಲಾಗಿರುವ ದೂರಿನ ಬಗ್ಗೆ ಆಲಿ ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ 129/ ಸಹಾಯಕ ಅಭಿಯಂತರರು ವಾರ್ಡ್-129 ಪರಿಶೀಲಿಸಲಾಗಿ, ಕೂಡಲೇ ಆದ್ಯತೆ ಮೇರೆಗೆ ಎಲ್ಲಾ ದೂರುಗಳನ್ನು ಪರಿಶೀಲಿಸಿ ಕ್ರಮ ವಹಿಸಬೇಕೆಂದು ಸೂಚಿಸಿ ಸದರಿ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ-129

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-129

ಪ್ರತಿಯನ್ನು:

1. ಆಪ್ತ ಸಹಾಯಕರು, ಮಾನ್ಯ ವಿಶೇಷ ಆಯುಕ್ತರು ಆಡಳಿತರವರಿಗೆ ಕಳುಹಿಸುತ್ತಾ, ಸದರಿ ಸಭೆಯ ನಡವಳಿಗಳನ್ನು ಮಾನ್ಯ ವಿಶೇಷ ಆಯುಕ್ತರು ಆಡಳಿತರವರ ಅವಗಾಹನೆಗೆ ತರಲು ಕೋರಿದೆ.
2. ಜಂಟಿ ಆಯುಕ್ತರು ರಾರಾನಗರ ವಲಯ. ರವರ ಮಾಹಿತಿಗಾಗಿ.
3. ಮುಖ್ಯ ಅಭಿಯಂತರರು ರಾರಾನಗರ ವಲಯ ರವರ ಮಾಹಿತಿಗಾಗಿ.
4. ಕಾರ್ಯಪಾಲಕ ಅಭಿಯಂತರರು ರಾರಾನಗರ ವಿಭಾಗ ರವರ ಮಾಹಿತಿಗಾಗಿ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
6. ವಾರ್ಡ್ ಸಮಿತಿ ಸದಸ್ಯರುಗಳಿಗೆ ಮಾಹಿತಿಗಾಗಿ.
7. ಕಛೇರಿ ಪ್ರತಿ